# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 207 |
| ಸದಸ್ಯರ ಹೆಸರು | : | ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 14.12.2021. |
| ಉತ್ತರಿಸುವವರು | : | ಪೌರಾಡಳಿತ, ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಯಾವ ರೀತಿಯ ಕೈಗಾರಿಕೆಗಳನ್ನು ಸಣ್ಣ ಕೈಗಾರಿಕೆಗಳೆಂದು ಪರಿಗಣಿಸಲಾಗುವುದು; ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ನಿಗದಿಪಡಿಸಿರುವ ಮಾನದಂಡಗಳೇನು; ಸಣ್ಣ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ಕೈಗೊಂಡಿರುವ ಕ್ರಮಗಳೇನು; | ಭಾರತ ಸರ್ಕಾರದ ಎಂ.ಎಸ್.ಎಂ.ಇ ಮಂತ್ರಾಲಯವು ದಿನಾಂಕ: 1/7/2020 ರಿಂದ ಸಣ್ಣ ಕೈಗಾರಿಕೆಗಳಿಗೆ ಹೊಸ ವ್ಯಾಖ್ಯಾನವನ್ನು ನೀಡಿದ್ದು ಅದು ಈ ಕೆಳಗಿನಂತಿರುತ್ತದೆ<br><br>ಯಾವ ಉತ್ಪಾದನಾ / ಸೇವಾ ಕೈಗಾರಿಕೆಯು ತನ್ನ ಘಟಕದ ಸ್ಥಾವರ ಮತ್ತು ಯಂತ್ರೋಪಕರಣಗಳಲ್ಲಿ ರೂ.10 ಕೋಟಿಗಿಂತ ಕಡಿಮೆ ಹೂಡಿಕೆ ಮಾಡಿದ್ದು ಮತ್ತು ಆ ಘಟಕದ ವಾರ್ಷಿಕ ವಹಿವಾಟು ರೂ.50 ಕೋಟಿಗಿಂತ ಕಡಿಮೆ ಇದ್ದಲ್ಲಿ ಅದನ್ನು ಸಣ್ಣ ಕೈಗಾರಿಕೆ ಎಂದು ಪರಿಗಣಿಸಲಾಗುತ್ತದೆ.<br><br>ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ ಅನುಮೋದನೆಯನ್ನು ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿಯಿಂದ ಪಡೆಯಬೇಕಾಗುತ್ತದೆ.<br><br>ರಾಜ್ಯದಲ್ಲಿ ಸಣ್ಣ ಸಣ್ಣ ಉದ್ಯಮಗಳನ್ನು ತೆರೆಯಲು ಉದ್ಯಮಶೀಲರು ಕನಿಷ್ಠ ಈ ಕೆಳಗಿನ ಮಾರ್ಗಸೂಚಿಯನ್ನು ಅನುಸರಿಸಬೇಕಾಗುತ್ತದೆ.<br><br>1. ಮಾಲೀಕತ್ವ ಉದ್ಯಮ ಸ್ಥಾಪಿಸಲು ಬಯಸುವ ಉದ್ಯಮಶೀಲರು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ/ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ನಿವೇಶನದಲ್ಲಿ ಕೈಗಾರಿಕೆಯನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿದಲ್ಲಿ "ಕಾಮನ್ ಅಪ್ಲಿಕೇಷನ್ ಫಾರಂ"ನ್ನು ಭರ್ತಿ ಮಾಡಿ ಅರ್ಜಿಯನ್ನು ಸಂಬಂಧಿಸಿದ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರಕ್ಕೆ ಸಲ್ಲಿಸಬೇಕಾಗುತ್ತದೆ.<br>2. ಜಿಲ್ಲಾ ಕೈಗಾರಿಕಾ ಕೇಂದ್ರವು ಈ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗುವ "ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿ" ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ತಾತ್ವಿಕ ಅನುಮೋದನಾ ಪತ್ರವನ್ನು ಉದ್ಯಮಶೀಲರಿಗೆ ನೀಡುತ್ತದೆ.<br>3. ನಂತರ ಉದ್ಯಮಶೀಲರು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ನಿವೇಶನಕ್ಕೆ ಅರ್ಜಿ ಸಲ್ಲಿಸಿ ನಿವೇಶನವನ್ನು ಪಡೆದುಕೊಳ್ಳಬೇಕಾಗುತ್ತದೆ. ಕರ್ನಾಟಕ |

| | | |
|---|---|---|
| | | ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ನಿವೇಶನವಾದಲ್ಲಿ ಅದಕ್ಕೆ ಸಂಬಂಧಿಸಿದ ಸಮಿತಿಯು ನಿವೇಶನವನ್ನು ಹಂಚಿಕೆ ಮಾಡುತ್ತದೆ.<br>4. ಉದ್ಯಮಶೀಲರು ನಿವೇಶನದ ಹಂಚಿಕೆ ಆದ ನಂತರ ಯೋಜನೆಯ ಅನುಷ್ಠಾನಕ್ಕೆ ಅಗತ್ಯವಾದ ಹಣಕಾಸಿನ ನೆರವಿಗಾಗಿ ಬ್ಯಾಂಕ್/ ಕೆ.ಎಸ್.ಎಫ್.ಸಿ ಗೆ ಯೋಜನಾವರದಿ ಮತ್ತು ಇತರೆ ಅಗತ್ಯ ದಾಖಲೆಗಳನ್ನು ಸಲ್ಲಿಸಿ ಸಾಲ ಮಂಜೂರಾತಿಯನ್ನು ಪಡೆದುಕೊಳ್ಳಬೇಕಾಗುತ್ತದೆ.<br>5. ಕೈಗಾರಿಕಾ ಕಟ್ಟಡ ನಿರ್ಮಾಣಕ್ಕಾಗಿ ಕೆ.ಐ.ಎ.ಡಿ.ಬಿ/ ಕೆ.ಎಸ್.ಎಸ್.ಐ.ಡಿ.ಸಿ/ಸ್ಥಳೀಯ ಪ್ರಾಧಿಕಾರ ಯಿಂದ ನಕ್ಷೆ ಅನುಮೋದನೆ ಪಡೆದುಕೊಂಡು ಕಟ್ಟಡ ನಿರ್ಮಾಣ ಪ್ರಾರಂಭಿಸಬೇಕಾಗುತ್ತದೆ.<br>6. ಕೈಗಾರಿಕಾ ಚಟುವಟಿಕೆಯನ್ನು ಆಧರಿಸಿ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ "ಕನ್ಸೆಂಟ್ ಫಾರ್ ಎಸ್ಟಾಬ್ಲಿಷ್‌ಮೆಂಟ್" ಅನುಮತಿಯನ್ನು ಪಡೆಯಬೇಕಾಗುತ್ತದೆ.<br>7. ವಿದ್ಯುತ್ ಸಂಪರ್ಕಕ್ಕಾಗಿ ಸಂಬಂಧಿಸಿದ ಎಸ್ಕಾಂನಿಂದ ಮಂಜೂರಾತಿಯನ್ನು ಪಡೆಯಬೇಕಾಗುತ್ತದೆ.<br>8. ನೀರಿನ ಸಂಪರ್ಕಕ್ಕಾಗಿ ಸಂಬಂಧಿಸಿದ ಪ್ರಾಧಿಕಾರದಿಂದ ಅನುಮತಿಯನ್ನು ಪಡೆಯಬೇಕಾಗುತ್ತದೆ.<br>9. ಚಟುವಟಿಕೆ / ಯಂತ್ರೋಪಕರಣಗಳನ್ನು ಆಧರಿಸಿ "ಫ್ಯಾಕ್ಟರೀಸ್ ಮತ್ತು ಬಾಯ್ಲರ್" ಇಲಾಖೆಯಿಂದ ಅನುಮತಿ ಪಡೆಯಬೇಕಾಗುತ್ತದೆ.<br>10. ಕಾರ್ಮಿಕರ ಸಂಖ್ಯೆಯನ್ನು ಆಧರಿಸಿ ಕಾರ್ಮಿಕ ಇಲಾಖೆಯಿಂದ ಅನುಮೋದನೆ ಪಡೆದುಕೊಳ್ಳಬೇಕಾಗುತ್ತದೆ.<br>11. ಕಾರ್ಮಿಕರ ಸಂಖ್ಯೆ 20 ಕ್ಕೂ ಹೆಚ್ಚಾದಲ್ಲಿ ಇ.ಎಸ್.ಐ/ ಪಿ.ಎಫ್/ವೃತಿ ತೆರಿಗೆ ನೊಂದಣಿ ಪಡೆಯಬೇಕಾಗುತ್ತದೆ.<br>12. ಉದ್ದೇಶಿತ ಕೈಗಾರಿಕೆಯ ವಾರ್ಷಿಕ ವಹಿವಾಟು ರೂ.40 ಲಕ್ಷಕ್ಕಿಂತ ಹೆಚ್ಚಾಗುವುದಿದ್ದಲ್ಲಿ ವಾಣಿಜ್ಯ ತೆರಿಗೆ ಇಲಾಖೆಯಿಂದ "ಜಿ.ಎಸ್.ಟಿ" ನೋಂದಣಿ ಪಡೆಯಬೇಕಾಗುತ್ತದೆ.<br>13. ಆಹಾರ ಸಂಸ್ಕರಣಾ ಕೈಗಾರಿಕಾ ಚಟುವಟಿಕೆಯಾದಲ್ಲಿ "ಎಫ್.ಎಸ್.ಎಸ್.ಎ.ಐ" ರಹದಾರಿಯನ್ನು ಪಡೆಯಬೇಕಾಗುತ್ತದೆ.<br>14. ಅಪಾಯಕಾರಿ ಕೈಗಾರಿಕಾ ಚಟುವಟಿಕೆಯಾದಲ್ಲಿ "ಅಗ್ನಿ ಸುರಕ್ಷತಾ ಪ್ರಮಾಣಪತ್ರ"ವನ್ನು ಅಗ್ನಿಶಾಮಕ ಇಲಾಖೆಯಿಂದ ಪಡೆದುಕೊಳ್ಳಬೇಕಾಗುತ್ತದೆ.<br>15. ಕಟ್ಟಡ ನಿರ್ಮಾಣ, ಯಂತ್ರೋಪಕಣರಗಳ ಸ್ಥಾಪನೆಯಾದ ನಂತರ ಕೈಗಾರಿಕಾ ಚಟುವಟಿಕೆಯನ್ನು ಆಧರಿಸಿ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ "ಕನ್ಸೆಂಟ್ ಫಾರ್ ಆಪರೇಷನ್" ಅನುಮತಿಯನ್ನು ಪಡೆಯಬೇಕಾಗುತ್ತದೆ. |

ಸಣ್ಣ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ಸರ್ಕಾರವು ಈ ಕೆಳಗಿನ ಕಾರ್ಯಕ್ರಮಗಳನ್ನು ಜಾರಿಗೆ ತಂದಿರುತ್ತದೆ.

1. ಕೇಂದ್ರ ಸರ್ಕಾರದ ಪ್ರಧಾನಮಂತ್ರಿಗಳ ಉದ್ಯೋಗ ಸೃಜನ ಯೋಜನೆಯಡಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಗರಿಷ್ಟ ಸಾಲ ರೂ. 25 ಲಕ್ಷಗಳವರೆಗೆ ಬ್ಯಾಂಕ್‌ಗಳ ಮೂಲಕ ಸಾಲ ಸೌಲಭ್ಯ ಒದಗಿಸಿ ಸಣ್ಣ ಉದ್ಯಮಗಳನ್ನು ಸ್ಥಾಪಿಸಿ ಸ್ವಯಂಉದ್ಯೋಗ ಕೈಗೊಳ್ಳಲು ಅನುಕೂಲ ಒದಗಿಸಲಾಗುವುದು ಹಾಗೂ ಯೋಜನಾ ವೆಚ್ಚದ ಮೇಲೆ ಶೇ. 15 ರಿಂದ ಶೇ.35 ರವರೆಗೆ ಗರಿಷ್ಟ ರೂ.3.75 ಲಕ್ಷದಿಂದ ರೂ.8.75 ಲಕ್ಷದವರೆಗೆ ಸಹಾಯಧನ ನೀಡಲಾಗುತ್ತಿದೆ.

2. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಸ್ಥಾಪಿಸಲು ರೂ.5.00 ಕೋಟಿಗಳವರೆಗೆ ಸಾಲ ಪಡೆದು ನಿಗದಿತ ಸಮಯದಲ್ಲಿ ಮರುಪಾವತಿ ಮಾಡಿದ ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕಾ ಘಟಕಗಳಿಗೆ 5 ವರ್ಷಗಳ ಅವಧಿಗೆ ಶೇಕಡ 6 ರಂತೆ ಬಡ್ಡಿ ಸಹಾಯಧನ ನೀಡಲಾಗುವುದು.

3. ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದ ಉದ್ಯಮಶೀಲರಿಗೆ ವಿಶೇಷ ಘಟಕ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಶೇ 75 ರಿಯಾಯಿತಿ ದರದಲ್ಲಿ ಕೈಗಾರಿಕಾ ನಿವೇಶನಗಳನ್ನು ಮತ್ತು ಕೈಗಾರಿಕಾ ಶೆಡ್‌ಗಳನ್ನು ನೀಡಲಾಗುತ್ತಿದೆ.

4. ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದ ಉದ್ಯಮಶೀಲರಿಗೆ ವಿಶೇಷ ಘಟಕ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಸ್ವಯಂ ಉದ್ಯೋಗ ಕೈಗೊಳ್ಳಲು ಬ್ಯಾಂಕಿನಿಂದ ಸಾಲ ಒದಗಿಸಿ ಯೋಜನಾ ವೆಚ್ಚದ ಮೇಲೆ ಶೇ 60 ರಷ್ಟು ಗರಿಷ್ಟ ರೂ.5.00 ಲಕ್ಷ ಸಹಾಯಧನ ನೀಡಲಾಗುತ್ತಿದೆ.

5. ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದ ಮೊದಲ ಪೀಳಿಗೆಯ ಉದ್ಯಮಿದಾರರು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಸ್ಥಾಪಿಸುವ ಹೊಸ ಘಟಕಗಳಿಗೆ ಗರಿಷ್ಟ ರೂ.5.00 ಕೋಟಿ ಯೋಜನಾ ವೆಚ್ಚದಲ್ಲಿ The Debt Equity Ratio 2:1 ಪ್ರಕಾರ (2/3 ರಷ್ಟು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಮತ್ತು 1/3 ಪ್ರವರ್ತಕರ ಬಂಡವಾಳ)ಘಟಕಕ್ಕೆ ಪ್ರವರ್ತಕ

| | | |
|---|---|---|
| | | ಬಂಡವಾಳ ಹೂಡಿಕೆಯ 1/3 ರಲ್ಲಿ ಶೇ.50 ರಷ್ಟು ಬಡ್ಡಿರಹಿತ ಗರಿಷ್ಟ ರೂ.75 ಲಕ್ಷ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ನೀಡಲಾಗುತ್ತಿದೆ.<br><br>6. ಕರ್ನಾಟಕ ರಾಜ್ಯ ಕೈಗಾರಿಕಾ ನೀತಿ 2020-25 ರಂತೆ ಕೆಳಕಾಣಿಸಿದ ಪ್ರೋತ್ಸಾಹ ಮತ್ತು ರಿಯಾಯಿತಿ ಸೌಲಭ್ಯಗಳನ್ನು ಅರ್ಹ ಕೈಗಾರಿಕೆಗಳಿಗೆ ನೀಡಿ ಉತ್ತೇಜಿಸಲಾಗುತ್ತಿದೆ.<br>1. ಮುದ್ರಾಂಕ ಶುಲ್ಕ ವಿನಾಯಿತಿ<br>2. ನೋಂದಣಿ ಶುಲ್ಕ ರಿಯಾಯಿತಿ.<br>3. ಬಂಡವಾಳ ಹೂಡಿಕೆ ಸಹಾಯಧನ<br>4. ಕಿರು ಮತ್ತು ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್ ಸಹಾಯಧನ<br>5. ಭೂ ಪರಿವರ್ತನಾ ಶುಲ್ಕ ಮರುಪಾವತಿ.<br>6. ರಫ್ತು ಆದಾರಿತ ಘಟಕಗಳಿಗೆ ರಿಯಾಯಿತಿ.<br>7. ತ್ಯಾಜ್ಯ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ.<br>8. ವಿದ್ಯುತ್‌ತೆರಿಗೆ ವಿನಾಯಿತಿ<br>9. ತಾಂತ್ರಿಕ ಉನ್ನತೀಕರಣ, ಗುಣಮಟ್ಟ ಪ್ರಮಾಣ ಪತ್ರ ಸಹಾಯಧನ<br>10. ಮಳೆ ನೀರುಕೊಯ್ಲು / ಸಂರಕ್ಷಣೆ ಸಹಾಯಧನ<br>11. ತಂತ್ರಜ್ಞಾನ ಉನ್ನತೀಕರಣಕ್ಕೆ ಬಡ್ಡಿ ಸಹಾಯಧನ |
| ಆ) | ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಎಷ್ಟು ಸಣ್ಣ ಕೈಗಾರಿಕೆಗಳು ಕಾರ್ಯನಿರ್ವಹಿಸುತ್ತಿವೆ; ಈ ಕೈಗಾರಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | ಭಾರತ ಸರ್ಕಾರದ ಉದ್ಯಮ ರಿಜಿಸ್ಟ್ರೇಷನ್ ಪೋರ್ಟಲ್ ಪ್ರಕಾರ ಬೆಂಗಳೂರು ನಗರ ಜಿಲ್ಲೆಯಲ್ಲಿ 30/6/2020 ರ ವರೆಗೆ ಒಟ್ಟು 2,14,555 ಘಟಕಗಳು ಕೈಗಾರಿಕೆಗಳೆಂದು ನೊಂದಣಿಯಾಗಿದ್ದು ಇವುಗಳಲ್ಲಿ 21,69,212 ಕಾರ್ಮಿಕರು ಕಾರ್ಯನಿರ್ವಹಿಸುತ್ತಿರುವುದಾಗಿ ನೋಂದಾಯಿಸಿವೆ.<br>ಕೈಗಾರಿಕೆಗಳ ವಿಳಾಸದೊಂದಿಗೆ ಮಾಹಿತಿಯನ್ನು ಸಿ.ಡಿ.ಯಲ್ಲಿ ನೀಡಲಾಗಿದೆ.<br>ಮುಂದುವರೆದು 1/7/2020 ರಿಂದ ಭಾರತ ಸರ್ಕಾರವು ಉದ್ಯೋಗ್ ರಿಜಿಸ್ಟ್ರೇಷನ್ ಪೋರ್ಟಲ್‌ನ್ನು ಪ್ರಾರಂಭಿಸಿದ್ದು ಇದರಲ್ಲಿ 05/12/2021 ರವರೆಗೆ ಬೆಂಗಳೂರು ನಗರ ಜಿಲ್ಲೆಯಲ್ಲಿ ಒಟ್ಟು 9,205 ಘಟಕಗಳು ಸಣ್ಣ ಕೈಗಾರಿಕೆಗಳೆಂದು ನೋಂದಣಿಯಾಗಿರುತ್ತವೆ. |
| ಇ) | ಈ ಕೈಗಾರಿಕೆಗಳಲ್ಲಿ ನೌಕರರಿಗೆ ಒದಗಿಸುತ್ತಿರುವ ಸೌಲಭ್ಯಗಳೇನು; (ಕೈಗಾರಿಕೆಗಳ ವಿಳಾಸದೊಂದಿಗೆ ವಾರ್ಡ್‌ವಾರು ವಿವರ ಒದಗಿಸುವುದು) | ಈ ಕೈಗಾರಿಕೆಗಳು ನಿಯಮಾನುಸಾರ ಭವಿಷ್ಯ ನಿಧಿ, ESI ಇನ್ನಿತರ ಸೌಲಭ್ಯಗಳನ್ನು ಒದಗಿಸಬೇಕಾಗುತ್ತದೆ. |

| | | |
|---|---|---|
| ಈ) | ಈ ಕೈಗಾರಿಕೆಗಳಿಗೆ ಮತ್ತು ನೌಕರರಿಗೆ ಸರ್ಕಾರದಿಂದ ನೀಡುತ್ತಿರುವ ಸೌಲಭ್ಯಗಳೇನು; ಈ ಕೈಗಾರಿಕೆಗಳಿಂದ ಕಳೆದ 2 ವರ್ಷಗಳಲ್ಲಿ ಸರ್ಕಾರಕ್ಕೆ ಬಂದಿರುವ ಆದಾಯವೆಷ್ಟು? | ಖಾದಿ ಕೈಗಾರಿಕೆಗಳ ಕಾರ್ಮಿಕರಿಗೆ ನೀಡುತ್ತಿರುವ ಸೌಲಭ್ಯ:- ಕರ್ನಾಟಕ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾದಿ ಸಂಘ ಸಂಸ್ಥೆಗಳು ಉತ್ಪಾದಿಸುತ್ತಿರುವ ಖಾದಿ ಉತ್ಪನ್ನಗಳಿಗೆ ಹೆಚ್ಚಿನ ಮಾರುಕಟ್ಟೆ ಒದಗಿಸುವ ದೃಷ್ಟಿಯಿಂದ ಹಾಗೂ ಕಸುಬುದಾರರಿಗೆ ನಿರಂತರ ಉದ್ಯೋಗವಕಾಶ ನೀಡುವ ದೃಷ್ಟಿಯಿಂದ ಖಾದಿ ಸಂಘ/ಸಂಸ್ಥೆಗಳಲ್ಲಿ ದುಡಿಯುತ್ತಿರುವ ನೂಲುಗಾರರು, ನೇಕಾರರು ಹಾಗೂ ಖಾದಿ ಕಾರ್ಯಕರ್ತರಿಗೆ ಪ್ರೋತ್ಸಾಹ ಮಜೂರಿಯನ್ನು ನೀಡಲಾಗುತ್ತಿದೆ.<br><br>ತೆಂಗಿನ ನಾರಿನ ಕಾರ್ಮಿಕರಿಗೆ ನೀಡುತ್ತಿರುವ ಸೌಲಭ್ಯ:- ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಹಾಗೂ ಕರ್ನಾಟಕ ರಾಜ್ಯ ತೆಂಗಿನ ಸಹಕಾರ ಮಹಾಮಂಡಳಿ ನಿಯಮಿತ, ಬೆಂಗಳೂರು ಸಂಸ್ಥೆಗಳ ತೆಂಗಿನ ನಾರಿನ ಉತ್ಪನ್ನಗಳನ್ನು ತಯಾರಿಕೆ ಮಾಡಲಾಗುತ್ತಿದ್ದು, ಸದರಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲಸಗಾರರಿಗೆ ನಿಗಮವು ಪಾವತಿಸುವ ತುಂಡು ಭತ್ಯೆಯೊಂದಿಗೆ ಸರ್ಕಾರವು ಅನುರೂಪ ವೇತನ ಪ್ರೋತ್ಸಾಹ ಮಜೂರಿಯನ್ನು ಪಾವತಿಸಲಾಗುತ್ತಿದೆ.<br><br>ಹೊಸ/ ವಿಸ್ತರಣೆ/ ಆಧುನೀಕರಣ/ ವೈರುಧ್ಧೀಕರಣ ಕಾರ್ಯಕ್ರಮದಡಿಯಲ್ಲಿ ಸ್ಥಾಪನೆಗೊಂಡ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಹೊಸ ಕೈಗಾರಿಕಾ ನೀತಿ 2020-25 ರನ್ವಯ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ನೀಡಲಾಗುತ್ತಿದ್ದು ಅವುಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br><br>ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯು ಸದರಿ ಕೈಗಾರಿಕೆಗಳಿಂದ ಯಾವುದೇ ಆದಾಯ ಸಂಗ್ರಹಿಸಿರುವುದಿಲ್ಲ. |

**ಸಿಐ 206 ಸಿಎಸ್‌ಸಿ 2021**

(ಎನ್. ನಾಗರಾಜು (ಎಂ.ಟಿ.ಬಿ))
ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ
ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು.

## ಅನುಬಂಧ-1: ಹೊಸ/ ವಿಸ್ತರಣೆ/ ಆಧುನೀಕರಣ/ ವೈರುದ್ಧಿಕರಣ ಕಾರ್ಯಕ್ರಮದಡಿಯಲ್ಲಿ ಸ್ಥಾಪನೆಗೊಂಡ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಹೊಸ ಕೈಗಾರಿಕಾ ನೀತಿ 2020-25 ರನ್ವಯ ನೀಡಲಾಗುವ ಪ್ರೋತ್ಸಾಹ ಮತ್ತು ರಿಯಾಯಿತಿಗಳು:

### ಆರ್ಥಿಕ ಉತ್ತೇಜನಗಳು

ಕೋಷ್ಟಕ 9.1.1

<table>
<tr><th>ಉತ್ತೇಜನದ ಮಾದರಿ</th><th>ಸಾಮಾನ್ಯ ಪ್ರವರ್ಗ</th><th>ವಿಶೇಷ ಪ್ರವರ್ಗ (ಪ.ಜಾತಿ/ಪ.ಪಂ, ಮಹಿಳೆಯರು,ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿಉದ್ಯಮಶೀಲ ಸೈನಿಕರು.</th></tr>
<tr><td rowspan="2">ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಹೂಡಿಕೆ ಉತ್ತೇಜನಾ ಸಹಾಯಧನ</td><td>ಸೂಕ್ಷ್ಮ ಕೈಗಾರಿಕೆಗಳು<br>ವಲಯ 1: ವಿಎಫ್ಎಯ 30% (ಗರಿಷ್ಟ ರೂ.25ಲಕ್ಷ)<br>ವಲಯ 2: ವಿಎಫ್ಎಯ 25% (ಗರಿಷ್ಟ ರೂ.20ಲಕ್ಷ)<br>ವಲಯ 3: ಇಲ್ಲ<br>ಸಣ್ಣ ಕೈಗಾರಿಕೆಗಳು<br>ವಲಯ 1: ವಿಎಫ್ಎಯ 25% (ಗರಿಷ್ಟ ರೂ.100ಲಕ್ಷ)<br>ವಲಯ 2: ವಿಎಫ್ಎಯ 20% (ಗರಿಷ್ಟ ರೂ.90ಲಕ್ಷ)<br>ವಲಯ 3: ಇಲ್ಲ<br>ವಿಎಫ್ಎ –ಸ್ಥಿರಾಸ್ತಿಯ ಮೌಲ್ಯ</td><td>ಸೂಕ್ಷ್ಮ ಕೈಗಾರಿಕೆಗಳು<br>ವಲಯ 1: ವಿಎಫ್ಎಯ 35% (ಗರಿಷ್ಟ ರೂ.30ಲಕ್ಷ)<br>ವಲಯ 2: ವಿಎಫ್ಎಯ 30% (ಗರಿಷ್ಟ ರೂ.25ಲಕ್ಷ)<br>ವಲಯ 3: ವಿಎಫ್ಎನ 10% (ಗರಿಷ್ಟ ರೂ.10ಲಕ್ಷ)<br>ಸಣ್ಣ ಕೈಗಾರಿಕೆಗಳು<br>ವಲಯ 1: ವಿಎಫ್ಎಯ 30% (ಗರಿಷ್ಟ ರೂ.105ಲಕ್ಷ)<br>ವಲಯ 2: ವಿಎಫ್ಎಯ 25% (ಗರಿಷ್ಟ ರೂ.95ಲಕ್ಷ)<br>ವಲಯ 3: ವಿಎಫ್ಎನ 10% (ಗರಿಷ್ಟ ರೂ.25ಲಕ್ಷ)<br>ವಲಯ 1 ಮತ್ತು 2 ರಲ್ಲಿ ವಿಎಫ್ಎಯ 5% ಹೆಚ್ಚುವರಿ ಸಬ್ಸಿಡಿ ಗರಿಷ್ಟ ರೂ.5 ಲಕ್ಷ</td></tr>
<tr><td colspan="2">ಸೂಚನೆ:<br>ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಪ್ರತೀ ಆರ್ಥಿಕ ವರ್ಷದಲ್ಲಿ ವಹಿವಾಟಿನ ಶೇ.10 ರಷ್ಟು ಹೂಡಿಕೆ ಉತ್ತೇಜನ ಸಬ್ಸಿಡಿಯನ್ನು ಪಡೆಯಬಹುದು ಮತ್ತು ಈ ಸಹಾಯಧನವನ್ನು ವಾಣಿಜ್ಯ ಉತ್ಪಾದನೆ ಆರಂಭಿಸಿದ ದಿನಾಂಕದಿಂದ ಗರಿಷ್ಠ 5 ಆರ್ಥಿಕ ವರ್ಷಗಳವರೆಗೆ ವಿಸ್ತರಿಸಬಹುದು. ಇಂತಹ ಸಂಚಿತ ಹೂಡಿಕೆ ಉತ್ತೇಜನಾ ಸಬ್ಸಿಡಿಯು ಮೇಲ್ಕಾಣಿಸಿದ ಗರಿಷ್ಟ ಮಿತಿಗೆ ಒಳಪಟ್ಟಿರುತ್ತದೆ. ಈ ಹೂಡಿಕೆ ಉತ್ತೇಜನಾ ಸಬ್ಸಿಡಿಯ ಮಿತಿಯು ಅವಧಿ ಮುಗಿಯುವವರೆಗೆ (5ಆರ್ಥಿಕ ವರ್ಷಗಳವರೆಗೆ )ಅಥವಾ ಮಿತಿ ಮುಗಿಯುವವರೆಗೆ ಯಾವುದು ಮೊದಲೋ ಅಲ್ಲಿವರೆಗೆ ಅನ್ವಯವಾಗುತ್ತದೆ ಮತ್ತು ಇದನ್ನು ಮುಂದೂಡುವಂತಿಲ್ಲ.</td></tr>
<tr><td>ಮಧ್ಯಮ ಕೈಗಾರಿಕೆಗಳಿಗೆ ಹೂಡಿಕೆ ಉತ್ತೇಜನಾ ಸಬ್ಸಿಡಿ<br>ಮೊದಲ 10 ಕೋಟಿ ರೂಗಳಿಗೆ ಕನಿಷ್ಟ ಉದ್ಯೋಗಾವಕಾಶ ಸಂಖ್ಯೆ 20 ಮತ್ತು ಮುಂದಿನ ಹೆಚ್ಚುವರಿ ಪ್ರತೀ ರೂ.10 ಕೋಟಿಗೆ ಹೆಚ್ಚುವರಿ 7 ಉದ್ಯೋಗಾವಕಾಶ ಪ್ರಮಾಣಾನುಪಾತದಂತೆ</td><td colspan="2">ಮಧ್ಯಮ ಕೈಗಾರಿಕೆಗಳು<br>
<table>
<tr><th>ವಲಯ</th><th>ಶೇಕಡಾವಾರು ವಹಿವಾಟು</th><th>ಗರಿಷ್ಟ ಅವಧಿ (ವರ್ಷ)</th><th>ವಿಎಫ್ಎ ಮಿತಿ</th></tr>
<tr><td>1</td><td rowspan="2">2.50%</td><td>6</td><td>ವಿಎಫ್ಎಯ 40 %</td></tr>
<tr><td>2</td><td>5</td><td>ವಿಎಫ್ಎಯ 35 %</td></tr>
<tr><td>3</td><td colspan="3">ಇಲ್ಲ</td></tr>
</table>
ಸೂಚನೆ:<br>ಮಧ್ಯಮ ಕೈಗಾರಿಕೆಗಳು ಹೂಡಿಕೆ ಉತ್ತೇಜನ ಸಬ್ಸಿಡಿಯನ್ನು ಪ್ರತೀ ಆರ್ಥಿಕ ವರ್ಷದಲ್ಲಿ ವಹಿವಾಟಿನ ಶೇಕಡಾವಾರು ಪಡೆಯಬಹುದಾಗಿದ್ದು ಮೇಲ್ಕಾಣಿಸಿದಂತೆ ವಾಣಿಜ್ಯ ಉತ್ಪಾದನೆ ಆರಂಭಿಸಿದ ಗರಿಷ್ಟ ಅವಧಿಗೆ ಅನ್ವಯವಾಗುವುದು. ಇಂತಹ ಸಂಚಿತ ಹೂಡಿಕೆ ಉತ್ತೇಜನಾ ಸಬ್ಸಿಡಿಯು ವಿಎಫ್ಎ ಮಿತಿ ಅಥವಾ ಅವಧಿ ಮುಗಿಯುವವರೆಗೆ ಯಾವುದು ಮೊದಲೋ ಅಲ್ಲಿವರೆಗೆ ಅನ್ವಯವಾಗುತ್ತದೆ ಮತ್ತು ಇದನ್ನು ಮುಂದೂಡುವಂತಿಲ್ಲ.<br>ಕಡಿಮೆ ಉದ್ಯೋಗಾವಕಾಶ ಒದಗಿಸಲು ಬಯಸುವ ಮಧ್ಯಮ ಕೈಗಾರಿಕೆಗಳು/ಹೂಡಿಕೆಗೆ ತಕ್ಕಂತೆ ನಿಗದಿಪಡಿಸಿದ ಉದ್ಯೋಗಾವಕಾಶ ನೀಡಲು ಸಾಧ್ಯವಾಗದ ಕೈಗಾರಿಕೆಗಳಿಗೆ ಒಟ್ಟು ಒದಗಿಸಿದ ಉದ್ಯೋಗಾವಕಾಶಕ್ಕೆ ಅನುಗುಣವಾಗಿ ವಹಿವಾಟು ಶೇಕಡಾವಾರು ಪ್ರಮಾಣ ಕಡಿಮೆ ಆಗುವುದು. ಹೀಗಿದ್ದರೂ ಗರಿಷ್ಟ ಅವಧಿ ಮತ್ತು ವಿಎಫ್ಎ ಮೇಲ್ಕಂಡಂತೆ ಇರಲಿದೆ.</td></tr>
</table>

| ಉತ್ತೇಜನದ ಮಾದರಿ | ಸಾಮಾನ್ಯ ಪ್ರವರ್ಗ | ವಿಶೇಷ ಪ್ರವರ್ಗ (ಪ.ಜಾತಿ/ಪ.ಪಂ, ಮಹಿಳೆಯರು,ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿಉದ್ಯಮಶೀಲ ಸೈನಿಕರು. |
|---|---|---|
| ಎಂಎಸ್ಎಂಇಗಳಿಗೆ ಸ್ಟಾಂಪ್ ಶುಲ್ಕ(ಡ್ಯೂಟಿ) ವಿನಾಯಿತಿ | ಸ್ಟಾಂಪ್ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿ ರಿಯಾಯಿತಿ:<br>ರಾಜ್ಯ ಹಣಕಾಸು ನಿಗಮ, ರಾಷ್ಟ್ರಮಟ್ಟದ ಹಣಕಾಸು ಸಂಸ್ಥೆಗಳು,ವಾಣಿಜ್ಯ ಬ್ಯಾಂಕ್‌ಗಳು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು, ಸಹಕಾರಿ ಬ್ಯಾಂಕ್‌ಗಳು, ಖಾದಿ ಮತ್ತು ಗ್ರಾಮೀಣ ಕೈಗಾರಿಕೆ ಮಂಡಳಿ, ಖಾದಿ ಮತ್ತು ಗ್ರಾಮೀಣ ಕೈಗಾರಿಕೆ ಆಯೋಗ(ಕಮಿಷನ್), ಕರ್ನಾಟಕ ರಾಜ್ಯ ಪ.ಜಾತಿ/ಪ.ವರ್ಗ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ ಮತ್ತಿತರ ಸಂಸ್ಥೆಗಳಿಂದ ಸಾಲ ಪಡೆಯಲಿಕ್ಕಾಗಿ ಸಾಲ ಒಪ್ಪಂದ, ಸಾಲ ಕರಾರು ಪತ್ರ, ಅಡಮಾನ, ಅಡಮಾನಿಕೆ ದಸ್ತಾವೇಜುಗಳಿಗಾಗಿ ಸರ್ಕಾರ ಕಾಲಾನುಕ್ರಮವಾಗಿ ಹೊರಡಿಸುವ ಅಧಿಸೂಚನೆಗಳಿಗೆ ಅನುಗುಣವಾಗಿ ನೀಡಬೇಕಾದ ಸ್ಟಾಂಪ್ ಶುಲ್ಕದಿಂದ ಆರಂಭದ 5 ವರ್ಷಗಳ ಕಾಲ ಮಾತ್ರ ವಿನಾಯಿತಿ ನೀಡಲಾಗುವುದು.<br>ಕೈಗಾರಿಕೋದ್ಯಮಿಗಳು, ಕೈಗಾರಿಕಾ ನಿವೇಶನ, ಷೆಡ್‌ಗಳು, ಕೈಗಾರಿಕಾ ಟೆನ್‌ಮೆಂಟ್ಸ್ ಮತ್ತು ಬಹುಮಹಡಿ ಸಂಕೀರ್ಣದ ಕಾರ್ಖಾನೆಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ, ಕಿಯಾನಿಕ್ಸ್, ಕೈಗಾರಿಕಾ ಸಹಕಾರ ಸಂಘಗಳು, ಅನುಮೋದಿತ ಖಾಸಗಿ ಕೈಗಾರಿಕಾ ವಸಾಹತುಗಳು/ಪಾರ್ಕ್‌ಗಳು, ಆಹಾರ ಪಾರ್ಕ್‌ಗಳು, ಕರ್ನಾಟಕ/ಭಾರತ ಸರ್ಕಾರದಿಂದ ರಚಿಸಲಾದ ವಿಶೇಷ ಉದ್ದೇಶ ವಾಹನ(ಎಸ್/ಪಿ.ವಿ)ಗಳಿಂದ ಹಂಚಿಕೆ ಪಡೆಯುವಲ್ಲಿ ಕೈಗಾರಿಕಾ ಉದ್ದಿಮೆಗಳು ಮಾಡಿಕೊಂಡ ಭೋಗ್ಯ ಪತ್ರ (ಲೀಸ್ ಡೀಡ್ಸ್), ಭೋಗ್ಯ ಮತ್ತು ಕ್ರಯ ಪತ್ರ, ಉಪ-ಭೋಗ್ಯ(ಸಬ್ ಲೀಸ್) ಹಾಗೂ ಪರಿಪೂರ್ಣ ಕ್ರಯ ಪತ್ರಗಳಿಗೂ ಈ ಕೆಳಗಿನಂತೆ ವಿನಾಯಿತಿ ನೀಡಬೇಕು.<br>ವಲಯ 1 : 100%<br>ವಲಯ 2 : 100%<br>ವಲಯ 3 : ಇಲ್ಲ | ವಲಯ 1 : 100%<br>ವಲಯ 2 : 100%<br>ವಲಯ 3 : 75% |
| ಎಂಎಸ್ಎಂಇಗಳಿಗೆ ನೋಂದಣಿ ಶುಲ್ಕದಲ್ಲಿ ರಿಯಾಯಿತಿ | ವಲಯ1, ವಲಯ 2 : ರೂ.1000/-ಕ್ಕೆ ರೂ.1/- ವಲಯ 3 : ಇಲ್ಲ | ಎಲ್ಲಾ ವಲಯಗಳಿಗೆ :ರೂ.1000/-ಕ್ಕೆ ರೂ.1/- |
| | ಸೂಚನೆ:<br>1. ಸ್ಟಾಂಪ್ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕ ರಿಯಾಯಿತಿಗಳು ಕೆಎಲ್‌ಆರ್ ಕಾಯ್ದೆ 1961ರ ಸೆಕ್ಷನ್ 109ರ ಅಡಿಯಲ್ಲಿ ಖರೀದಿಸಿದ ಭೂಮಿ, ಹಾಗೂ ಎಸ್‌ಎಲ್‌ಡಬ್ಲ್ಯುಸಿಸಿ/ಡಿಎಲ್‌ಡಬ್ಲ್ಯುಸಿಸಿ ಅನುಮೋದಿತ ಯೋಜನೆಗಳ ಕೈಗಾರಿಕಾ ಭೂಪರಿವರ್ತಿತ ಭೂಮಿಯ ನೇರ ಖರೀದಿಗೂ ಅನ್ವಯವಾಗುವುದು. ಸ್ವಾಧೀನಪಡಿಸಿಕೊಂಡ ಭೂಮಿಗೆ ಪರಿಹಾರವಾಗಿ ಕೆಐಎಡಿಬಿ ಭೂ ಮಾಲೀಕರಿಗೆ ನೀಡುವ ಭೂಮಿಗೂ ಈ ರಿಯಾಯಿತಿ/ವಿನಾಯಿತಿ ನೀಡಲಾಗುವುದು.<br>2. ಭೂಮಿ,ಕೈಗಾರಿಕಾ ನಿವೇಶನ, ಷೆಡ್‌ಗಳು, ಕೈಗಾರಿಕಾ ಟೆನ್‌ಮೆಂಟ್ಸ್‌ಗಳಿಗೆಭೋಗ್ಯದ ಅವಧಿ ಮುಗಿದ ಬಳಿಕ ಅಂತಿಮ ಕ್ರಯ ಪತ್ರ (ಸೇಲ್ ಡೀಡ್)ದ ನೋಂದಣಿಗೂ ಕೈಗಾರಿಕಾ ನೀತಿಯಲ್ಲಿ ನಮೂದಿಸಿರುವಂತೆ ಭೋಗ್ಯ ಮತ್ತು ಕ್ರಯಪತ್ರ (ಲೀಸ್ ಕಮ್ ಸೇಲ್ ಡೀಡ್) ಮಾಡುವ ವೇಳೆ ಚಾಲ್ತಿಯಲ್ಲಿದ್ದ ಪ್ರಕಾರ ಸ್ಟಾಂಪ್ ಶುಲ್ಕ ವಿನಾಯ್ತಿ ಮತ್ತು ನೋಂದಣಿ ಶುಲ್ಕಗಳಲ್ಲಿ ರಿಯಾಯ್ತಿ ಲಭ್ಯವಾಗುವುದು. | |
| ಎಂಎಸ್ಎಂಇಗಳಿಗೆ ಭೂ ಪರಿವರ್ತನಾ ಶುಲ್ಕ ಮರುಪಾವತಿ | ವಲಯ 1 : 100%<br>ವಲಯ 2 : 100%<br>ವಲಯ 3 : ಇಲ್ಲ | ವಲಯ 1 : 100%<br>ವಲಯ 2 : 100%<br>ವಲಯ 3 : 75% |
| ಎಂಎಸ್ಎಂಇಗಳಿಗೆ ವಿದ್ಯುತ್‌ಶುಲ್ಕದ ಮೇಲಿನ ತೆರಿಗೆ ವಿನಾಯಿತಿ | ವಲಯ 1 : 100% 7 ವರ್ಷದವರೆಗೆ<br>ವಲಯ 2 : 100% 6 ವರ್ಷದವರೆಗೆ<br>ವಲಯ 3 : ಇಲ್ಲ | ವಲಯ1 : 100% 8 ವರ್ಷದವರೆಗೆ<br>ವಲಯ 2 : 100% 7 ವರ್ಷದವರೆಗೆ<br>ವಲಯ 3 : 100% 4 ವರ್ಷದವರೆಗೆ |
| ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್‌ಚ್ಛಕ್ತಿ ಸಬ್ಸಿಡಿ | **ವಲಯ 1 ಮತ್ತು 2ಕ್ಕೆ ಮಾತ್ರ**: ಬಳಸಿದ ಪ್ರತಿ ವಿದ್ಯುತ್ ಯುನಿಟ್ ಒಂದಕ್ಕೆ ಪಾವತಿಸಿದ ವಿದ್ಯುತ್ ಶುಲ್ಕಕ್ಕೆ ರೂ.1/-ರಂತೆ 3 ವರ್ಷಗಳ ಅವಧಿವರೆಗೆ ವಿದ್ಯುತ್‌ಚ್ಛಕ್ತಿ ಸಬ್ಸಿಡಿ. | |
| ಕುಶಲಕರ್ಮಿಗಳಿಗೆ ಬೆಂಬಲ | 1. ಕುಶಲಕರ್ಮಿಗಳಿಗೆ ಶೇ. 4% ಬಡ್ಡಿದರದಲ್ಲಿ ಅವಧಿ ಸಾಲ(ಟರ್ಮ್ ಲೋನ್) ಮತ್ತು ದುಡಿಮೆ ಬಂಡವಾಳ ಸಾಲ.<br>2. ಕುಶಲಕರ್ಮಿಗಳ ಕರಕುಶಲ ವಸ್ತುಗಳ ವಹಿವಾಟಿನ ಮೇಲೆ ಶೇ. 10%ರಷ್ಟು ಮಾರುಕಟ್ಟೆ ಅಭಿವೃದ್ಧಿ ನೆರವು (ಎಂಡಿಎ)<br>3. ಕರಕುಶಲ ಸಂಘಟನೆಗಳಿಗೆ, ಕರಕುಶಲ ಕಾಂಪ್ಲೆಕ್ಸ್‌ಗಳಿಗೆ.ಸಮೂಹ ಮೊದಲಾದವುಗಳಿಗೆ ಯಂತ್ರೋಪಕರಣಗಳು,ಬಿಡಿ ಭಾಗಗಳಿಗೆ 75% ಅನುದಾನ | |

05

ಕೋಷ್ಟಕ 9.1.2

| ಎಂಎಸ್‌ಎಂಇಗಳಿಗೆ ತಂತ್ರಜ್ಞಾನ ಅಳವಡಿಕೆ ಮತ್ತು ನವೋನ್ವೇಷಣೆ | | |
|---|---|---|
| | ಸಾಮಾನ್ಯ ಪ್ರವರ್ಗ | ವಿಶೇಷ ಪ್ರವರ್ಗ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಮಹಿಳೆಯರು, ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿ ಸೈನಿಕ ಉದ್ಯಮಿಗಳು) |
| ತಂತ್ರಜ್ಞಾನ ಮೇಲ್ದರ್ಜೆಗೇರಿಸುವ ಸಾಲದ ಮೇಲೆ ಬಡ್ಡಿ ಸಹಾಯಧನ | ವಲಯ1 : 5% 6 ವರ್ಷದವರೆಗೆ *<br>ವಲಯ 2 : 5% 5 ವರ್ಷದವರೆಗೆ *<br>ವಲಯ 3 : 5% 5 ವರ್ಷದವರೆಗೆ *<br><br>* ಭಾರತ ಸರ್ಕಾರದ ಸಿಎಲ್‌ಸಿಎಸ್‌ಎಸ್(ಕ್ರೆಡಿಟ್ ಲಿಂಕ್ಡ್ ಕ್ಯಾಪಿಟಲ್ ಸಬ್ಸಿಡಿ ಸ್ಕೀಂ-ಸಾಲ ಸಂಯೋಜಿತ ಬಂಡವಾಳ ಸಹಾಯಧನ ಯೋಜನೆ) ಅಡಿಯಲ್ಲಿ ಒಳಗೊಂಡಿರದ ಕೆಎಸ್‌ಎಫ್‌ಸಿ ಮತ್ತು ಅನುಸೂಚಿತ (ಷೆಡ್ಯೂಲ್ಡ್) ವಾಣಿಜ್ಯ ಬ್ಯಾಂಕ್‌ಗಳಿಂದ ಪಡೆದ ಸಾಲಗಳಿಗೆ | ವಲಯ 1 : 5% 6 ವರ್ಷದವರೆಗೆ *<br>ವಲಯ 2 : 5% 5 ವರ್ಷದವರೆಗೆ *<br>ವಲಯ 3 : 5% 5 ವರ್ಷದವರೆಗೆ *<br><br>* ಭಾರತ ಸರ್ಕಾರದ ಸಿಎಲ್‌ಸಿಎಸ್‌ಎಸ್(ಕ್ರೆಡಿಟ್ ಲಿಂಕ್ಡ್ ಕ್ಯಾಪಿಟಲ್ ಸಬ್ಸಿಡಿ ಸ್ಕೀಂ-ಸಾಲ ಸಂಯೋಜಿತ ಬಂಡವಾಳ ಸಹಾಯಧನ ಯೋಜನೆ) ಅಡಿಯಲ್ಲಿ ಒಳಗೊಂಡಿರದ ಕೆಎಸ್‌ಎಫ್‌ಸಿ ಮತ್ತು ಅನುಸೂಚಿತ (ಷೆಡ್ಯೂಲ್ಡ್) ವಾಣಿಜ್ಯ ಬ್ಯಾಂಕ್‌ಗಳಿಂದ ಪಡೆದ ಸಾಲಗಳಿಗೆ |
| ತಂತ್ರಜ್ಞಾನ ಅಳವಡಿಕೆಗೆ | ಎಲ್ಲಾ ವಲಯಗಳಿಗೆ<br>ವೆಚ್ಚದ 25% (ಗರಿಷ್ಟ ರೂ.50,000/-) ಅನುಬಂಧ 8ರಲ್ಲಿ ಉಲ್ಲೇಖಿಸಲಾದ ಭಾರತ ಸರ್ಕಾರದ ಮಾನ್ಯತೆ ಪಡೆದ ಪ್ರಯೋಗಾಲಯಗಳಿಂದ ತಂತ್ರಜ್ಞಾನ ಅಳವಡಿಸಿದ್ದಕ್ಕಾಗಿ | ಎಲ್ಲಾ ವಲಯಗಳಿಗೆ<br>ವೆಚ್ಚದ 50% (ಗರಿಷ್ಟ ರೂ.1 ಲಕ್ಷ )ಅನುಬಂಧ 8ರಲ್ಲಿ ಉಲ್ಲೇಖಿಸಲಾದ ಭಾರತ ಸರ್ಕಾರದ ಮಾನ್ಯತೆ ಪಡೆದ ಪ್ರಯೋಗಾಲಯಗಳಿಂದ ತಂತ್ರಜ್ಞಾನ ಅಳವಡಿಸಿದ್ದಕ್ಕಾಗಿ . |
| ತಂತ್ರಜ್ಞಾನ ವ್ಯವಹಾರ ವಿಕಸನ ಕೇಂದ್ರ (ಟಿಬಿಐಸಿ) | ಎಲ್ಲಾ ವಲಯಗಳಿಗೆ<br>ವಿಕಸನ ಕೇಂದ್ರ (ಇನ್‌ಕ್ಯುಬೇಷನ್ ಕೇಂದ್ರ)ದ ವೆಚ್ಚದ 25% (ಗರಿಷ್ಟ ರೂ.50.00 ಲಕ್ಷ) (ವಲಯ 1 ರಲ್ಲಿ ಕನಿಷ್ಟ 1 ಟಿಬಿಐಸಿ ) | ಎಲ್ಲಾ ವಲಯಗಳಿಗೆ<br>ವಿಕಸನ ಕೇಂದ್ರ (ಇನ್‌ಕ್ಯುಬೇಷನ್ ಕೇಂದ್ರ)ದ ವೆಚ್ಚದ 25% (ಗರಿಷ್ಟರೂ.60.00 ಲಕ್ಷ)(ವಲಯ 1 ರಲ್ಲಿ ಕನಿಷ್ಟ 1 ಟಿಬಿಐಸಿ ) |
| ಗುಣಮಟ್ಟ ಪ್ರಮಾಣೀಕರಣಕ್ಕೆ ಉತ್ತೇಜನ | ಎಲ್ಲಾ ವಲಯಗಳಿಗೆ<br>ಐಎಸ್‌ಓ ಸರಣಿ ಪ್ರಮಾಣೀಕರಣ ವೆಚ್ಚದ 75%<br>(ಗರಿಷ್ಟ ರೂ.75,000)<br>ಬಿಐಎಸ್ ಪ್ರಮಾಣೀಕರಣ: ಬಿಐಎಸ್(ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್)ಗೆ ಪಾವತಿ ಮಾಡಬೇಕಾದ ಶುಲ್ಕದ 50% (ಗರಿಷ್ಟ ರೂ.20,000/-) & 25% ವೆಚ್ಚ (ಗರಿಷ್ಟ ರೂ.50,000/-)ಬಿಐಎಸ್ ಅನುಮೋದಿಸಿದಂತೆ ಪರೀಕ್ಷಾ ಉಪಕರಣ ಖರೀದಿಗೆ | ಎಲ್ಲಾ ವಲಯಗಳಿಗೆ<br>ಐಎಸ್‌ಓ ಸರಣಿ ಪ್ರಮಾಣೀಕರಣ ವೆಚ್ಚದ 75%<br>(ಗರಿಷ್ಟ ರೂ.1,00,000)<br>ಬಿಐಎಸ್ ಪ್ರಮಾಣೀಕರಣ: ಬಿಐಎಸ್(ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್)ಗೆ ಪಾವತಿ ಮಾಡಬೇಕಾದ ಶುಲ್ಕದ 50% (ಗರಿಷ್ಟ ರೂ.25,000/-) & 25% ವೆಚ್ಚ (ಗರಿಷ್ಟ ರೂ.1,00,0000/--)ಬಿಐಎಸ್ ಅನುಮೋದಿಸಿದಂತೆ ಪರೀಕ್ಷಾ ಉಪಕರಣ ಖರೀದಿಗೆ |
| | ಮಹಿಳಾ ಮಾಲಿಕತ್ವದ ವಾಣಿಜ್ಯ ಉದ್ಯಮ(ಡಬ್ಲ್ಯುಬಿಸಿ) ವೀಕನೆಕ್ಟ್ ಪ್ರಮಾಣೀಕರಣ : ಎಲ್ಲಾ ವಲಯಗಳಿಗೆ<br>3 ವರ್ಷಗಳ ಅವಧಿವರೆಗೆ ಗರಿಷ್ಟ ರೂ.75,000/-<br>ಪ್ರಮಾಣಪತ್ರ ಶುಲ್ಕದ 100% ಮೊದಲ ವರ್ಷಕ್ಕೆ -ಗರಿಷ್ಟ ರೂ.30,000/-<br>ಪ್ರಮಾಣಪತ್ರ ಶುಲ್ಕದ 90% ಎರಡನೇ ವರ್ಷಕ್ಕೆ-ಗರಿಷ್ಟ ರೂ.27,000/-<br>ಪ್ರಮಾಣಪತ್ರ ಶುಲ್ಕದ 80% ಮೂರನೇ ವರ್ಷಕ್ಕೆ ಗರಿಷ್ಟ ರೂ 18,000/- | |

ಕೋಷ್ಟಕ 9.1.3

| ಎಂಎಸ್‌ಎಂಇಗಳ ಸುಸ್ಥಿರತೆ ಮತ್ತು ಜವಾಬ್ಧಾರಿಯುತ ಕೈಗಾರಿಕೀಕರಣ | | |
|---|---|---|
| ಯಾವ ರೀತಿಯ ಬೆಂಬಲ | ಸಾಮಾನ್ಯ ಪ್ರವರ್ಗ | ವಿಶೇಷ ಪ್ರವರ್ಗ : (ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ, ಮಹಿಳೆಯರು, ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿ ಸೈನಿಕ ಉದ್ಯಮಿಗಳು) |
| ಮಳೆ ನೀರು ಕೊಯ್ಲು | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 50% (ಗರಿಷ್ಟ ರೂ.2 ಲಕ್ಷ ) | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 75% (ಗರಿಷ್ಟ ರೂ.2.50 ಲಕ್ಷ ) |
| ತ್ಯಾಜ್ಯ ನೀರು ಸಂಸ್ಕರಣೆ | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 50% (ಗರಿಷ್ಟ ರೂ.7.50 ಲಕ್ಷ) | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 75% (ಗರಿಷ್ಟ ರೂ.8.50 ಲಕ್ಷ ) |
| ನೀರಿನ ಲೆಕ್ಕ ಪರಿಶೋಧನೆ(ಆಡಿಟ್)ಗೆ ತಗುಲಿದ ವೆಚ್ಚ ಮರುಪಾವತಿ | ಎಲ್ಲಾ ವಲಯಗಳಿಗೆ<br>75% ಗರಿಷ್ಟ ರೂ.1ಲಕ್ಷ ಪ್ರತೀ ನೀರಿನ ಆಡಿಟ್‌ಗೆ (ಒಂದು ಬಾರಿಗೆ) | ಎಲ್ಲಾ ವಲಯಗಳಿಗೆ<br>75% ಗರಿಷ್ಟ ರೂ.1ಲಕ್ಷ ಪ್ರತೀ ನೀರಿನ ಆಡಿಟ್‌ಗೆ (ಒಂದು ಬಾರಿಗೆ) |
| ಶೂನ್ಯ ತ್ಯಾಜ್ಯ/ ಹೊರಸೂಸುವಿಕೆ | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 50% (ಗರಿಷ್ಟ ರೂ.7.50ಲಕ್ಷ) | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 75% (ಗರಿಷ್ಟ ರೂ.8.50ಲಕ್ಷ) |
| ಇಲೆಕ್ಟ್ರಾನಿಕ್ ತ್ಯಾಜ್ಯ ಮತ್ತು ಪ್ಲಾಸ್ಟಿಕ್ ತ್ಯಾಜ್ಯ ಗಳ ಮರುಬಳಕೆ | ಎಲ್ಲಾ ವಲಯಗಳಿಗೆ<br>ವಿಎಫ್‌ಎನ ಶೇ.5ರಷ್ಟು (ಗರಿಷ್ಟ ರೂ.10ಲಕ್ಷ) | ಎಲ್ಲಾ ವಲಯಗಳಿಗೆ<br>ವಿಎಫ್‌ಎನ ಶೇ.5ರಷ್ಟು (ಗರಿಷ್ಟ ರೂ.12ಲಕ್ಷ) |
| ತ್ಯಾಜ್ಯ ಸಂಸ್ಕರಣಾ ಘಟಕ(ಇಟಿಪಿ) ಸ್ಥಾಪನೆಗೆ ಸಹಾಯಧನ | ಎಲ್ಲಾ ವಲಯಗಳಿಗೆ<br>ಇಟಿಪಿಯ ವೆಚ್ಚದ ಶೇ.50 ರಷ್ಟು (ಗರಿಷ್ಟ ರೂ.50 ಲಕ್ಷ) | ಎಲ್ಲಾ ವಲಯಗಳಿಗೆ<br>ಇಟಿಪಿಯ ವೆಚ್ಚದ ಶೇ.75 ರಷ್ಟು (ಗರಿಷ್ಟ ರೂ.60 ಲಕ್ಷ) |